ಓ ಎಸ್ 399/2021

**ಪಿ. ಡಬ್ಲ್ಯೂ ಃ 1**

**ದಿಃ 28.10.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 13 ರವರ ಪರ ಶ್ರೀ ಎಸ್ ಎಂ ವಕೀಲರಿಂದಃ**

ನನ್ನ ತಂದೆಯ ತಂದೆಯ (ತಾತ) ಹೆಸರು ಚಿಕ್ಕನರಸಿಂಹಯ್ಯ ಇರುತ್ತದೆ. ನನ್ನ ತಂದೆಯ ತಾಯಿಯ ಹೆಸರು ರಂಗಮ್ಮ ಅಲಿಯಾಸ್ ಚಿಕ್ಕ ರಂಗಮ್ಮ ಇರುತ್ತದೆ. ನನ್ನ ತಾತನಿಗೆ 5 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳೆಂದರೆ ನನ್ನ ತಂದೆ ರಾಜಯ್ಯ, ನನ್ನ ತಂದೆಯ ತಮ್ಮಂದಿರಾದ ಮೊದಲನೇ ಚಿಕ್ಕರಂಗಪ್ಪ, 2 ನೆ ನರಸಿಂಹಯ್ಯ, 3 ನೆ ರಾಮಕೃಷ್ಣಯ್ಯ ಮತ್ತು 4 ನೆ ಉಗ್ರಯ್ಯ ಇರುತ್ತಾರೆ. ನನ್ನ ತಾಯಿಯ ಹೆಸರು ಜಯಮ್ಮ. ನನ್ನ ತಾಯಿ ಜಯಮ್ಮ ನವರ ತಂದೆಯ ಹೆಸರು ಚಿಕ್ಕಣ್ಣ. ನನ್ನ ತಾತ ಚಿಕ್ಕಣ್ಣ ರವರಿಗೆ ಒಬ್ಬರು ಅಣ್ಣ, ಲಿಂಗಣ್ಣ ಅಲಿಯಾಸ್ ಲಿಂಗಪ್ಪ ಇರುತ್ತದೆ. ಲಿಂಗಣ್ಣ ಅಲಿಯಾಸ್ ಲಿಂಗಪ್ಪರವರಿಗೆ 3 ಮಕ್ಕಳಿರುತ್ತಾರೆ. ಅವರೆಂದರೆ 1 ನೆ ಗಂಗಮ್ಮ, 2 ನೆ ಸಿದ್ದಮ್ಮ ಮತ್ತು 3 ನೆ ಚಿಕ್ಕಬೈರಪ್ಪ ಆಗಿರುತ್ತಾರೆ. ಚಿಕ್ಕಬೈರಪ್ಪ ಎಂದರೆ ಎದುರುದಾರ 1 ಆಗಿರುತ್ತಾರೆ ಎಂದರೆ ಸರಿ. ಗಂಗಮ್ಮ ನವರಿಗೆ ಎಷ್ಟು ಜನ ಮಕ್ಕಳೆಂದರೆ 4 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳಿರುತ್ತಾರೆ. ಅವರೆಂದರೆ ಮೊದಲನೇ ನೀಲಮ್ಮ, 2 ನೇ ಹನುಮಂತರಾಜು, 3 ನೆ ಕೃಷ್ಣಮೂರ್ತಿ, 4 ನೆ ಸೋಮಶೇಖರ್, 5 ನೆ ಮಹಾದೇವಮ್ಮ, 6 ನೆ ಹೆಂಜಾರಪ್ಪ ಮತ್ತು 7 ನೇ ಲಲಿತ ಇರುತ್ತಾರೆ.

ದಾವಾ ಸ್ವತ್ತುಗಳು ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳೆಂದರೆ ಸಾಕ್ಷಿ ನನ್ನ ತಾಯಿಯ ಆಸ್ತಿಗಳೆಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ನನ್ನ ತಾತ ಚಿಕ್ಕಣ್ಣ ನವರ ಒಟ್ಟು ಕುಟುಂಬದ ಸ್ವತ್ತುಗಳೆಂದರೆ ಸಾಕ್ಷಿ ದಾವಾ ಸ್ವತ್ತುಗಳು ಚಿಕ್ಕಣ್ಣನವರ ಅಜ್ಜಿ ಪುಟ್ಟನರಸಮ್ಮ ರವರಿಗೆ ಸೇರಿದ ಆಸ್ತಿಗಳಾಗಿರುತ್ತವೆ ಎಂದು ನುಡಿಯುತ್ತಾರೆ. ಪುಟ್ಟನರಸಮ್ಮ ನವರಿಗೆ ಒಂದು ಮಗು ಇತ್ತು, ಅವರ ಹೆಸರು ಚಿಕ್ಕಣ್ಣ. ಪುಟ್ಟ ನರಸಮ್ಮ ನವರ ಮಗ ಚಿಕ್ಕಣ್ಣ ನವರಿಗೆ ಇಬ್ಬರು ಮಕ್ಕಳಿದ್ದು, ಅವರ ಹೆಸರು ನಿಂಗಪ್ಪ ಮತ್ತು ಚಿಕ್ಕಣ್ಣ ಎಂದರೆ ಸರಿ. ಪುಟ್ಟನರಸಮ್ಮ ಮತ್ತು ನಿಂಗಪ್ಪ ನವರಿಗೆ ದಾವಾ ಸ್ವತ್ತುಗಳು ಸೇರಿರುತ್ತವೆ ಎಂದರೆ ಸರಿ. ನಿಂಗಪ್ಪ ಮತ್ತು ಚಿಕ್ಕಣ್ಣ ನವರು ದಾವಾ ಸ್ವತ್ತುಗಳನ್ನು ಹಂಚಿಕೊಳ್ಳಲು ಯಾವುದೆ ವಿಭಾಗ ಪತ್ರವನ್ನು ಮಾಡಿಕೊಂಡಿರುವುದಿಲ್ಲ. ಎಲ್ಲ ಸ್ವತ್ತುಗಳಲ್ಲಿ ನಿಂಗಪ್ಪ ಮತ್ತು ಚಿಕ್ಕಣ್ಣ ನವರಿಗೆ ಮತ್ತು ನನ್ನ ಅಣ್ಣ ತಮ್ಮಂದಿರಿಗೆ ಆಸ್ತಿಯಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ.

ಪಿತ್ರಾರ್ಜಿತ ಆಸ್ತಿಗಳನ್ನು ನಾನು ಮತ್ತು ಪ್ರತಿವಾದಿ 1 ರವರು ಸೇರಿಕೊಂಡು ಈ ದಾವೆ ಹೂಡುವ ಮೊದಲು ರೂ. 3 ಕೋಟಿಗಳಿಗೆ ರಾಘವೇಂದ್ರ ರವರಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸಾಕ್ಷಿ ಅದನ್ನು ಪ್ರತಿವಾದಿ 1 ರವರು ಮಾರಿರುತ್ತಾರೆ ಎಂದು ಹೇಳಿ ಅದನ್ನು ನಾನು ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ಮಾರಾಟ ಮಾಡಿ ಬಂದ ಹಣವನ್ನು ನಾನು ಪಡೆದಿರುತ್ತೇನೆ ಎಂದರೆ ಸಾಕ್ಷಿ ನಾನು ಸದರಿ ಅಸ್ತಿಯನ್ನು ಮಾರಾಟ ಮಾಡಿರುವುದಿಲ್ಲ, ಆದರೆ ಪ್ರತಿವಾದಿ 1 ರವರು ಮಾರಾಟ ಮಾಡಿರುತ್ತಾರೆ, ನಾನು ಸಾಕ್ಷಿಯಾಗಿ ಮಾತ್ರ ಸಹಿ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

ನನಗೆ ಪ್ರತಿವಾದಿ 13 ರವರು ಗೊತ್ತಿರುತ್ತಾರೆ. ಓ ಎಸ್ 735/2022 ರಲ್ಲಿ ನಾನು ಮತ್ತು ವಾದಿ 2 ರವರು ಸದರಿ ದಾವೆಯಲ್ಲಿ ಪ್ರತಿವಾದಿಗಳಾಗಿರುತ್ತೇವೆ ಎಂದರೆ ಸರಿ. ಓ ಎಸ್ 558/2022 ಎಂಬ ದಾವೆಯಲ್ಲಿ ನೋಂದಣಿಯಾಗದ ಕರಾರುಪತ್ರದ ಮೇಲೆ ಒಂದು ದಾವೆಯನ್ನು ನನ್ನ ಮೇಲೆ ಹೂಡಲಾಗಿರುತ್ತದೆ ಎಂದರೆ ಸರಿಯಲ್ಲ. ಚಿಕ್ಕಬೈರಪ್ಪ ನವರ ಹತ್ತಿರ ನಾನು ರೂ. 20 ಲಕ್ಷ ಹಣವನ್ನು ಪಡೆದಿರುತ್ತೇನೆ ಎಂದು 1ನೆ ಅಪರ ನ್ಯಾಯಾಲಯದಲ್ಲಿ ಓ ಎಸ್ 558/2022 ರಲ್ಲಿ ದಾವೆ ನಡೆಯುತ್ತಿದೆ ಎಂದರೆ ಸರಿಯಲ್ಲ. ನನ್ನ ವಾದಪತ್ರ 9 ಹಾಳೆಗಳು ಇರುತ್ತದೆ ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು 22 ಹಾಳೆಗಳಲ್ಲಿ ಹಾಕಿರುತ್ತೇನೆ ಎಂದರೆ ಇರಬಹುದು. ನಾನು ಸಾಕ್ಷಿ ವಿಚಾರಣೆ ಮಾಡಿರುವುದಕ್ಕೂ ಮತ್ತು ನಾನು ಸಲ್ಲಿಸಿರುವ ವಾದಪತ್ರಕ್ಕೂ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಾನು ಮತ್ತು ಎದುರುದಾರರು ಸೇರಿ ಪ್ರತಿವಾದಿ 13 ರವರಿಗೆ ಮೋಸ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ಬೈರಪ್ಪ ನವರು ಒಟ್ಟು ಕುಟುಂಬದ ಅಸ್ತಿಯನ್ನು ಮಾರಾಟ ಮಾಡಿ ಹಣವನ್ನು ಹಂಚಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. 13ನೆ ಪ್ರತಿವಾದಿಗೆ ಬರಬೇಕಾದ ಆಸ್ತಿಯ ಭಾಗವನ್ನು ಕೊಡದೇ ದುರುದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಪ್ರತಿವಾದಿ 1 ರಿಂದ 6 , 7 , 9 to 11 ರವರ ಪರ ಶ್ರೀ ಆರ್ ಎಸ್ ವಕೀಲರಿಂದ ಃ**

ನಾನು ನನ್ನ ರುಜು, ನನ್ನ ಸಹೋದರಿ ಮತ್ತು ನನ್ನ ತಂದೆ ರುಜುಗಳನ್ನು ನೋಡಿದರೆ ಗುರುತಿಸುತ್ತೀರಾ ಎಂದರೆ ಸಾಕ್ಷಿ ನಾನು ನನ್ನ ಮತ್ತು ನನ್ನ ತಂಗಿಯ ರುಜುವನ್ನು ಗುರುತಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ತಾಯಿ ಕನ್ನಡದಲ್ಲಿ ರುಜು ಮಾಡುತ್ತಿದ್ದೆ, ನನ್ನ ತಂದೆ ಆಂಗ್ಲ

ಭಾಷೆಯಲ್ಲಿ ರುಜು ಮಾಡುತ್ತಿದ್ದರು ಎಂದರೆ ಸಾಕ್ಷಿ ನನ್ನ ತಾಯಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ರುಜು ಮಾಡುತ್ತಿದ್ದರು ಮತ್ತು ನನ್ನ ತಂದೆ ಕನ್ನಡ ಭಾಷೆಯಲ್ಲಿ ರುಜು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಎಲ್ಲ ದಾಖಲಾತಿಗಳಿಗೆ ನಾನು ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

ವ್ಯಾಗನಹಳ್ಳಿ ಹೊನ್ನಸಿದ್ದಯ್ಯ ನನ್ನ ದೊಡ್ಡಪ್ಪ ಎಂದರೆ ಸರಿ. ನಿ ಪಿ 20 ಮತ್ತು ನಿ ಪಿ 21 ರಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಗಳಲ್ಲಿ 2ನೆ ವಾದಿ ವೀಣಾ ರವರು ಸಹಿ ಮಾಡಿರುತ್ತಾರೆ ಎಂದರೆ ಸರಿ. ರಾಘವೇಂದ್ರರವರಿಗೆ ಆಗಿರುವ ಪತ್ರವನ್ನು ಉಪ ನೋಂದಾಣಾಧಿಕಾರಿಗಳ ಕಚೇರಿಗೆ ನಾನು ಹೋಗಿ ನೋಡಿರುತ್ತೇನೆ ಮತ್ತು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಸದರಿ ದಾಖಲಾತಿಯಲ್ಲಿ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. **ನಿ ಪಿ 20 ಮತ್ತು ನಿ ಪಿ 21 ರ ಕೊನೆಯ ಪುಟದಲ್ಲಿ ಇರುವ ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅದನ್ನು ನಿಪಿ 20 (ಎ) ಮತ್ತು ನಿಪಿ 21 (ಎ) ಎಂದು ಗುರುತಿಸಲಾಯಿತು. ನಿ ಪಿ 20 ಮತ್ತು 21 ರಲ್ಲಿ ನನ್ನ ತಂಗಿ ಸಹಿ ಮಾಡಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.**

ನನ್ನ ತಾಯಿ ಜಯಮ್ಮ ನವರು ತೀರಿಕೊಂಡ ಕಾರಣ ಸದರಿ ದಾಖಲಾತಿಗಳಿಗೆ ಸಾಕ್ಷಿದಾರನಾಗಿ ರುಜು ಮಾಡಿರುತ್ತೇನೆ ಎಂದರೆ ಸರಿ. ನಿ ಪಿ 20 ಮತ್ತು 21 ರಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ, ಆದರೆ ಕ್ರಯಕ್ಕೆ ಕೊಟ್ಟವರ ರುಜುಗಳ ಜೊತೆ ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನನ್ನ ಹತ್ತಿರ ಸಾಕ್ಷಿ ಎಂದು ಹೇಳಿ ಸಹಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ಜಯಮ್ಮ ನವರಿಗೆ ಸೇರಿದ ಭಾಗ 1ನೆ ಪ್ರತಿವಾದಿಯ ಹೆಸರಿನಲ್ಲಿ ಕಂದಾಯ ದಾಖಲಾತಿ ಇದ್ದ ಕಾರಣ 1ನೆ ಪ್ರತಿವಾದಿ ಸದರಿ ನಿ ಪಿ 20 ಮತ್ತು 21 ರಲ್ಲಿ ಬಂದು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಭಾಗ ಸ್ವಲ್ಪ ಭಾಗ ಮಾರಿದ ಕಾರಣ ಅವರು ರುಜು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಎರಡು ಪತ್ರಗಳಲ್ಲಿ ನನಗೆ ಭಾಗಕ್ಕೆ ಸೇರಿದ ಸ್ವತ್ತುಗಳು ಮಾರಾಟವಾಗಿರುತ್ತದೆ ಎಂದು ಬರೆದಿರುತ್ತದೆ ಎಂದರೆ ಸರಿಯಲ್ಲ. ಎರಡು ಕ್ರಯಪತ್ರಗಳು ಸರಿ ಇರುವುದಿಲ್ಲವೆಂದು ಮತ್ತು ನನಗೆ ಆಸ್ತಿಗಳು ಹಿಂದಿರುಗಿಸಲು ನಾನು ಯಾವುದಾದರೂ ದಾವೆಯನ್ನು ಹೂಡಿರುತ್ತೇನೆಯೋ ಎಂದರೆ ಸಾಕ್ಷಿ ನಾನು ಪ್ರಸ್ತುತ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕ : 6.01.2021 ರ ಕ್ರಯಪತ್ರಗಳು ಆಗುವ ಪೂರ್ವದಲ್ಲಿ ನಮ್ಮ ತಾಯಿ ಜಯಮ್ಮ ಮತ್ತು ಚಿಕ್ಕ ಬೈರಪ್ಪ ನವರ ನಡುವೆ ವಿಭಾಗವಾಗಿತ್ತು ಎಂದರೆ ಸರಿಯಲ್ಲ. ಪ್ರತಿವಾದಿಗಳು ಈ ದಾವೆಗೆ ಹಾಕಿರುವ ತಕರಾರನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ಸಾಕ್ಷಿಯ ಸಹಿ ಇರುತ್ತದೆಯೇ ಎಂದು ಕೇಳಿದರೆ ಸಾಕ್ಷಿ ಅದರಲ್ಲಿ ಯಾವುದೆ ಸಹಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ : 29.10.2009 ರಲ್ಲಿ ನಮ್ಮ ತಾಯಿ ಜಯಮ್ಮ ಮತ್ತು 1ನೆ ಪ್ರತಿವಾದಿ ಚಿಕ್ಕಬೈರಪ್ಪ ನವರ ನಡುವೆ ಆಗಿರುವ ವಿಭಾಗಪತ್ರದ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸುಳ್ಳು. ಸದರಿ ವಿಭಾಗಪತ್ರದಲ್ಲಿ ನನ್ನ ದೊಡ್ಡಪ್ಪ ಹೊನ್ನಸಿದ್ದಯ್ಯ ರವರು ಬರೆದು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಮತ್ತು ನಮ್ಮ ಕುಟುಂಬಕ್ಕೆ ಸೇರಿದ ಎಲ್ಲ ಜಮೀನುಗಳು ಮಾರಾಟ ಆಗಿದ್ದು, ನನಗೆ ದಾವಾ ಸ್ವತ್ತುಗಳಲ್ಲಿ ಯಾವುದೆ ಹಕ್ಕು ಇಲ್ಲ ಎಂದರೆ ಸುಳ್ಳು. ನಾನು ವಿದ್ಯಾವಂತನಾಗಿದ್ದು, ನಾನು ಉಳಿದ ಪ್ರತಿವಾದಿಗಳಿಗೆ ಮೋಸ ಮಾಡಲು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ಸುಳ್ಳು.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**